# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 689 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12-03-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅನುಷ್ಠಾನಿಸಲಾಗಿರುವ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ಕಾಮಗಾರಿಗಳ ಸಮಗ್ರ ಯೋಜನಾ ವರದಿಯನ್ನು ಹೆದ್ದಾರಿ ಹಾದು ಹೋಗುವ ಪ್ರಸ್ತುತ ಜನ ಸಂಖ್ಯೆ ಹಾಗೂ ವಾಹನ ಸಾಂದ್ರತೆಗನುಗುಣವಾಗಿ ಪರಿಷ್ಕರಿಸಲಾಗಿದೆಯೇ; | ರಾಜ್ಯದಲ್ಲಿ ಅನುಷ್ಠಾನಿಸಲಾಗಿರುವ ರಾಷ್ಟ್ರೀಯ ಹೆದ್ದಾರಿ ಚತುಷ್ಪಥ ರಸ್ತೆ ಕಾಮಗಾರಿಗಳ ಸಮಗ್ರ ಯೋಜನಾ ವರದಿಯನ್ನು ವಾಹನ ಸಾಂದ್ರತೆಗನುಗುಣವಾಗಿ ತಯಾರಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿ ಅನುಮೋದನೆ ಪಡೆದು MoRTH ಮಾರ್ಗಸೂಚಿಗಳ ಪ್ರಕಾರ ಸಮಗ್ರ ಯೋಜನಾ ವರದಿಯಂತೆ ಚತುಷ್ಪಥ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. |
| ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಅನುಷ್ಠಾನಿಸಲಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ-169 ಚತುಷ್ಪಥದಲ್ಲಿ ನಿರ್ಮಾಣವಾಗುತ್ತಿರುವ ಅಂಡರ್ ಪಾಸ್, ಫ್ಲೈಓವರ್ ಹಾಗೂ ಸರ್ವೀಸ್ ರಸ್ತೆಗಳ ಸಂಖ್ಯೆಯೆಷ್ಟು; ಇವುಗಳ ಸಂಖ್ಯೆ ಕಡಿಮೆಯಿರುವ ಕಾರಣ ರಸ್ತೆ ಅಪಘಾತಗಳ ಸಂಖ್ಯೆ ಅಧಿಕಗೊಳ್ಳುವ ಹಿನ್ನಲೆಯಲ್ಲಿ ಯೋಜನಾ ವರದಿಯನ್ನು ಪರಿಷ್ಕರಿಸಿ ಅಗತ್ಯ ಮಾರ್ಪಾಡು ಮಾಡುವ ಬಗ್ಗೆ ಸರ್ಕಾರದ ನಿಲುವೇನು; | ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರಿಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 169ರ ಕಿ.ಮೀ.153.00 ರಿಂದ ಕಿ.ಮೀ.168.27 ವರೆಗೆ (ಮಾಳಾದಿಂದ ಕಾರ್ಕಳ ಪುಲ್ಕೇರಿ ಜಂಕ್ಷನ್‌ವರೆಗೆ) ನಿರ್ವಹಿಸಲಾಗುತ್ತಿದ್ದು, ಪ್ರಸ್ತುತ ಚತುಷ್ಪಥ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ಈ ಭಾಗದಲ್ಲಿ ಯಾವುದೇ ಅಂಡರ್ ಪಾಸ್, ಫ್ಲೈಓವರ್ ಹಾಗೂ ಸರ್ವೀಸ್ ರಸ್ತೆಗಳನ್ನು ನಿರ್ಮಿಸಿರುವುದಿಲ್ಲ.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಅವರ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿ-169ರ ರಸ್ತೆಯ ವಿವರವನ್ನು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>• ಸನ್ನೂರು ಜಂಕ್ಷನ್ ನಿಂದ ಬಿಕರ್ನಕಟ್ಟೆ ವರೆಗೆ (ರಾಹೆ-169) ನಾಲ್ಕು ಪಥದ ರಸ್ತೆ ಉನ್ನತಿಕರಣ ಕಾಮಗಾರಿಯನ್ನು ಕೈಗೊಂಡಿದ್ದು, ಇದರಲ್ಲಿ ಹಾಲಿ ಇರುವ ಕಿ.ಮೀ.698.850 ರಿಂದ ಕಿ.ಮೀ.744.190 ರವರೆಗಿನ ಭಾಗವನ್ನು HAM ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಯೋಜನೆಯ ಒಟ್ಟು ಉದ್ದವು 45.00 ಕಿ.ಮೀ. ಆಗಿರುತ್ತದೆ.<br>• ಸ್ಥಳದ ಅಗತ್ಯತೆಗೆ ಅನುಗುಣವಾಗಿ ಸದರಿ ಯೋಜನಯಲ್ಲಿ 4 ಸಂಖ್ಯೆಯ ಕೆಳ ಸೇತುವೆ ಮತ್ತು ಮೇಲು ಸೇತುವೆ, 2 ಫ್ಲೈಓವರ್ ಮತ್ತು 26.95 ಕಿ.ಮೀ ಉದ್ದದ ಸರ್ವಿಸ್ ರಸ್ತೆಯನ್ನು ಪ್ರಸ್ತಾಪಿಸಲಾಗಿರುತ್ತದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಇ) | ಕರಾವಳಿ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ–169 ಚತುಷ್ಪಥ ಹಾದು ಹೋಗುವ ಪ್ರದೇಶಗಳಲ್ಲಿ ಹೆಚ್ಚು ಜನಸಾಂದ್ರತೆಯಿದ್ದು ಹಲವು ತಾಲೂಕು, ಹೋಬಳಿ ಕೇಂದ್ರ ಸ್ಥಾನ ಹಾಗೂ ಗ್ರಾಮಗಳಲ್ಲಿ ಎರಡು ಬದಿಗಳಲ್ಲಿ ಹಲವು ಸಂಪರ್ಕ ರಸ್ತೆಗಳು ಇದ್ದು ಹೆದ್ದಾರಿ ಪ್ರಾಧಿಕಾರ ಮಂಜೂರು ಮಾಡಿದ ಫ್ಲೈಓವರ್ ಹಾಗೂ ಸರ್ವೀಸ್ ರಸ್ತೆಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಯಾವಾಗ ಆಯಾಯ ಪ್ರದೇಶದ ನಾಗರಿಕರು ಹಲವಾರು ಕಿಲೋ ಮೀಟರುಗಳಷ್ಟು ಸ್ವತ್ತು ಬಳಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವ ಬಗ್ಗೆ ಇಲಾಖೆ ಯಾವ ಕ್ರಮ ವಹಿಸಿದೆ; | ರಾಷ್ಟ್ರೀಯ ಹೆದ್ದಾರಿ, ವಲಯ ಬೆಂಗಳೂರುಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ–169ರ ಕಿ.ಮೀ.153.00 ರಿಂದ ಕಿ.ಮೀ.168.27 ವರೆಗೆ (ಮಾಳಾದಿಂದ ಕಾರ್ಕಳ ಪುಲ್ಕೇರಿ ಜಂಕ್ಷನ್ ವರೆಗೆ) ಪ್ರಸ್ತುತ ನಾಲ್ಕು ಪಥ ರಸ್ತೆ ಕಾಮಗಾರಿ ಪ್ರಗತಿಯಲ್ಲಿದ್ದು, ನಗರ ಪರಿಮಿತಿಯಲ್ಲಿ 500 ಮೀ ಅಂತರದಲ್ಲಿ ಹಾಗೂ ಹಳ್ಳಿ ಪರಿಮಿತಿಯಲ್ಲಿ 2000 ಮೀ ಅಂತರದಲ್ಲಿ **MoRTH** ನಿಯಾಮಾವಳಿಯಂತೆ ಮೀಡಿಯನ್ ಓಪನಿಂಗ್ ನೀಡಲಾಗಿರುತ್ತದೆ.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುವಂತೆ ನಿಗಧಿತ ಯೋಜನೆಯಲ್ಲಿ ನಿರ್ಮಿಸಿದ ಸ್ಥಳದಲ್ಲಿ 26.95 ಕಿ.ಮೀ ಉದ್ದದ ಸರ್ವಿಸ್ ರಸ್ತೆಯನ್ನು ಪ್ರಸ್ತಾಪಿಸಲಾಗಿದೆ. |
| ಈ) | ಕೆಲವು ಪ್ರದೇಶಗಳಲ್ಲಿ ಮಳೆಯ ಮತ್ತು ನೈಸರ್ಗಿಕ ನೀರು ಹರಿಯುವ ಸ್ಥಳಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಸೂಕ್ತ ಮಟ್ಟದಲ್ಲಿ ಸೇತುವೆ/ ಅಂಡರ್‌ಪಾಸ್ ನಿರ್ಮಿಸದೆ ಮಳೆಗಾಲದಲ್ಲಿ ಕೃಷಿ ಭೂಮಿ ಮತ್ತು ನಾಗರಿಕಜನ ವಸತಿ ಪ್ರದೇಶಗಳಲ್ಲಿ ಮಳೆ ನೀರು ನುಗ್ಗುವ ಸಂಭವವಿರುವ ಬಗ್ಗೆ ಸ್ಥಳೀಯ ಪರಿಸ್ಥಿತಿಗಳನ್ನು ಪರಿಗಣಿಸಿ ಅಗತ್ಯ ಕ್ರಮ ವಹಿಸಲಾಗಿದೆಯೆ; | ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸದರಿ ಯೋಜನೆಯಲ್ಲಿ ಮಳೆಯ ನೀರು ಮತ್ತು ನೈಸರ್ಗಿಕ ನೀರಿನ ಹರಿವನ್ನು ಸುಗಮಗೊಳಿಸಲು 01 ಸಣ್ಣ ಸೇತುವೆ, 131 ಬಾಕ್ಸ್ ಮೋರಿಗಳು, 85 ಸಂಖ್ಯೆ ಅಡ್ಡ ರಸ್ತೆ ಮೋರಿಗಳನ್ನು ಪ್ರಸ್ತಾಪಿಸಲಾಗಿದೆ ಎಂದು ವರದಿಸಿರುತ್ತಾರೆ. |
| ಉ) | ಈ ಎಲ್ಲಾ ಅಂಶಗಳ ಕುರಿತು ಸರಕಾರ ಹೆದ್ದಾರಿ ಇಲಾಖೆಗೆ ಮನವಿ/ಪತ್ರ ಸಲ್ಲಿಸಿದೆಯೇ? (ವಿವರ ನೀಡುವುದು) | ಈ ಸಂಬಂಧ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಯಾವುದೇ ಮನವಿ/ಪತ್ರ ಸಲ್ಲಿಸಿರುವುದಿಲ್ಲ. |

ಕಡತ ಸಂಖ್ಯೆ: ಲೋಇ 108 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು